ತೆಗೆದುಕೊಳ್ಳಲಾಗಿದೆ. ಅದರಲ್ಲಿ ಈಗಾಗಲೇ ೧೦ ಲಕ್ಷ ರೂಪಾಯಿಗಳನ್ನು ಅದಕ್ಕಾಗಿ ಇಟ್ಟಿದ್ದೇವೆ. ಭೂ ಸ್ವಾಧೀನ ಮಾಡಿಕೊಳ್ಳಲಿಕ್ಕೆ ಏನೇನು ಆಬ್ಜೆಕ್ಷನ್ ಬರುತ್ತದೆ. ಅದನ್ನು ನೋಡಿಕೊಂಡು ಕೆಲಸ ಪ್ರಾರಂಭ ಮಾಡುತ್ತೇವೆ. ಮಾನ್ಯ ಸದಸ್ಯರು ಭೂ ಸ್ವಾಧೀನ ಮಾಡಿಕೊಳ್ಳುವಾಗ ಮುಂದೆ ಬಂದು ರೈತರ ಮನವೊಲಿಸಿ ಭೂಮಿಯನ್ನು ಕೊಡಿಸಿಕೊಡುತ್ತೇನೆಂದರೆ ಕೆಲಸ ಶುರು ಮಾಡಲಿಕ್ಕೆ ತೊಂದರೆಯೇನೂ ಇಲ್ಲ. ಪ್ರಮುಖವಾಗಿರತಕ್ಕ ವಾಸ್ತವಾಂಶ ಇಷ್ಟೆ.

ಶ್ರೀ ವಿನಯಕುಮಾರ್ ಸೊರಕೆ.—ಮಾನ್ಯ ಮುಖ್ಯಮಂತ್ರಿಗಳು ಬೈಪಾಸ್ ರಸ್ತೆ ಮಾಡಲಿಕ್ಕೆ ಭೂಸ್ವಾಧೀನ ಮಾಡಿಕೊಳ್ಳಲಿಕ್ಕೆ ಹಣವನ್ನು ಇಟ್ಟಿದ್ದೇವೆಂದು ಹೇಳಿದ್ದಾರೆ. ಕಳೆದ ಸಲ ಕೂಡ ಈ ಬಗ್ಗೆ ಪ್ರಸ್ತಾಪ ಮಾಡಲಾಗಿತ್ತು. ಬೈಪಾಸ್ ರಸ್ತೆ ಮಾಡಲಿಕ್ಕೆ ಭೂ ಸ್ವಾಧೀನ ಮಾಡಿಕೊಳ್ಳಲಿಕ್ಕೆ ರಾಜೀ ಪಂಚಾಯಿತಿ ಮಾಡಿ ಭೂಮಿಯನ್ನು ಕೊಡಿಸಿದರೆ ಅಲ್ಲಿ ಕೆಲಸ ಶುರು ಮಾಡೋಣವೆನ್ನುವ ತಿಳುವಳಿಕೆಯನ್ನು ಕೊಟ್ಟಿದ್ದಾರೆ. ಈ ವರ್ಷ ಭೂ ಸ್ವಾಧೀನ ಮಾಡಿಕೊಳ್ಳಲಿಕ್ಕೆ ೧೦ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆಂದು ಹೇಳಿದ್ದಾರೆ. ರಾಜೀ ಪಂಚಾಯತಿ ಮೂಲಕ ಜನರು ಭೂಮಿಯನ್ನು ಕೊಡುವುದಕ್ಕೆ ಮುಂದೆ ಬಂದರೆ ಆ ಕೆಲಸವನ್ನು ಕೂಡಲೇ ಶುರು ಮಾಡಲಿಕ್ಕೆ ರಸ್ತೆ ನಿರ್ಮಾಣಕ್ಕೆ ಹಣವನ್ನು ಇಟ್ಟಿಲ್ಲ. ೧೯೮೭-೮೮ರ ಬಜೆಟ್‌ನಲ್ಲಿ ರಸ್ತೆನಿರ್ಮಾಣಕ್ಕೂಸ್ಕರ ಹಣವನ್ನು ಇಟ್ಟಿದ್ದರೆ ಅಕ್ವಿಜಿಷನ್ ಕೆಲಸ ಮುಗಿದು ರಸ್ತೆ ನಿರ್ಮಾಣ ಮಾಡತಕ್ಕ ಕೆಲಸವನ್ನು ಮಾಡಬಹುದಾಗಿತ್ತು. ತಾತ್ಕಾಲಿಕ ಕೆಲಸ ಪ್ರಾರಂಭ ಮಾಡಲಿಕ್ಕೆ ಹಣವನ್ನು ಇಟ್ಟು ಕೂಡಲೇ ಕೆಲಸವನ್ನು ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಓಟ್ಟಾರೆ ರಸ್ತೆಯ ತೀವ್ರತೆ ಏನೆಂಬುದನ್ನು ಮಾನ್ಯ ಸದಸ್ಯರು ಸಭೆಯ ಮುಖಾಂತರ ಕ್ಷೇತ್ರದ ಜನತೆಯ ಮುಖಾಂತರ ಸರ್ಕಾರದ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಆದರ ಬಗ್ಗೆ ವಾದವಿವಾದ ಇಲ್ಲ. ಅಕ್ವಿಜಿಷನ್ ಪ್ರೊಸಿಡಿಂಗ್ಸ್ ಹೇಗೆ ಆಗುತ್ತದೆ ಎನ್ನುವುದು ತಮಗೆ ಗೊತ್ತಿದೆ. ಯಾರಾದರೂ ಒಬ್ಬರು ಕೋರ್ಟಿಗೆ ಹೋದರೆ ಮತ್ತೆ ಇದು ಡಿಲೇ ಆಗುತ್ತದೆ. ಅದನ್ನು ನಾನು ಆಗಲೇ ಹೇಳಿದ್ದೇನೆ. ರೈತರ ಮನವೊಲಿಸಲಿಕ್ಕೆ ಸದಸ್ಯರು ಪ್ರಯತ್ನ ಮಾಡಿದರೆ, ನಾನು ಬರುತ್ತೇನೆ. ಇದರ ಬಗ್ಗೆ ಇಷ್ಟು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಎಷ್ಟು ಜಾಗ್ರತೆ ಭೂಮಿ ಸಿಗುತ್ತದೆ ಅಷ್ಟು ಜಾಗ್ರತೆ ತಾತ್ಕಾಲಿಕ ಕೆಲಸ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಹಣಕಾಸಿನ ಬಗ್ಗೆ ಹೇಳುವುದಾದರೆ ಕಳೆದ ಸಲ ನಾವು ಹಣವನ್ನು ಇಟ್ಟಿದ್ದೆವು. ಒಂದು ರೂಪಾಯಿ ಕೂಡಾ ಖರ್ಚಾಗಲಿಲ್ಲ. ಈ ಸಾರಿ ಹಣವನ್ನು ಇಟ್ಟಿದ್ದೇವೆ. ಲ್ಯಾಂಡ್ ಅಕ್ವಿಜಿಷನ್ ಪ್ರಾಬ್ಲಮ್ಸ್ ಇದೆ. ಅದನ್ನು ರಾಜೀ ಪಂಚಾಯತಿ ಮುಖಾಂತರ ಮಾಡಿಕೊಡುವುದಾದರೆ ನಾವು ಟೋಕನ್ ಅಡ್ವಾನ್ಸ್ ಕೊಡುತ್ತೇವೆ. ಮಾನ್ಯ ಸದಸ್ಯರು ಸರ್ಕಾರಕ್ಕೆ ಸಹಕಾರ ಕೊಡುವುದಾದರೆ ಕೆಲಸ ಶುರು ಮಾಡುತ್ತೇವೆ. ಅಧಿವೇಶನ ಮುಗಿದ ಮೇಲೆ ನಾವು ನೀವು ಎಲ್ಲಾ ಸೇರಿ ಆ ಬಗ್ಗೆ ಪ್ರಯತ್ನ ಮಾಡೋಣ.

ಬೆಂಗಳೂರು ಮೈಸೂರು ನಡುವಣ ರಸ್ತೆಯನ್ನು ಜೋಡಿ ರಸ್ತೆಯನ್ನಾಗಿ ಪರಿವರ್ತಿಸುವುದು.

೮೦೦. ಶ್ರೀ ಪಿ. ಎಂ. ಚಿಕ್ಕಬೋರಯ್ಯ (ಚಾಮರಾಜ).—ಮಾನ್ಯ ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು, ಮೈಸೂರು ನಡುವಣ ವಾಹನಗಳ ಸಂಚಾರ ಅತಿಯಾಗಿರುವ ಕಾರಣ, ಆಗಾಗ್ಗೆ ಸಂಭವಿಸುವ ಅಪಘಾತಗಳನ್ನು ತಪ್ಪಿಸಲು ಕ್ಷಿಪ್ರ ಸಂಚಾರವೇರ್ಪಡುವ ಸಲುವಾಗಿ ಈ ಮಾರ್ಗವನ್ನು "ಎಕ್ಸ್‌ಪ್ರೆಸ್ ಮಾರ್ಗ"ವಾಗಿ ಮಾಡಲು ಏನು ಕ್ರಮ ಕೈಗೊಳ್ಳಲಾಗಿದೆ.

ಆ) ಆ ರೀತಿ ಕಾರ್ಯ ಜರುಗಿಸದಿರಲು ಅಡಚಣೆಯೇನಾದರೂ ಇದೆಯೆ ;

ಇ) ಆ ಮಾರ್ಗ ನಿರ್ಮಾಣದ ಕಾರ್ಯ ಎಂದು ಪ್ರಾರಂಭವಾಗುವುದು?

ಶ್ರೀ ಹೆಚ್. ಡಿ. ದೇವೆಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಬೆಂಗಳೂರು–ಮೈಸೂರುಗಳ ನಡುವೆ ''ಎಕ್ಸ್‌ಪ್ರೆಸ್'' ಮಾರ್ಗ ಮಾಡುವ ವಿಚಾರವು ಪರಿಶೀಲನೆಯಲ್ಲಿದೆ.

ಆ) ಮತ್ತು ಇ) ಈ ಕೆಲಸಕ್ಕೆ ಪ್ರಾಜೆಕ್ಟ್ ತಯಾರು ಮಾಡಲು ಕನ್ಸಲ್ಟೆಂಟ್ ಫರ್ಮ್‌ಗಳಿಂದ ಬಂದಿರುವ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗುತ್ತಿದೆ. ಅಂದಾಜು ಪಟ್ಟಿ ತಯಾರಾದ ಮೇಲೆ ಹಣಕಾಸಿನ ಲಭ್ಯತೆಯನ್ನಾಧರಿಸಿ ಕೆಲಸವನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ನನ್ನ ಕೊನೆಯ ಪ್ರಶ್ನೆ (ಇ) ಗೆ ಉತ್ತರ ಬಂದಿಲ್ಲ ಮೈಸೂರು ಮತ್ತು ಬೆಂಗಳೂರು ರಸ್ತೆಯಲ್ಲಿ ಆಗಾಗಕ್ಕೆ ಅಪಘಾತಗಳು ಏನಿವೆ ಅವುಗಳು ಮಾನ ಮಂತ್ರಿಗಳ ಗಮನಕ್ಕೆ ಬಂದಿದೆಯೆ ? ಮಂತ್ರಿಗಳವರ ಗಮನಕ್ಕೆ ಬಂದಿದೆಯೆಂದೂ ನಾನು ಭಾವಿಸುತ್ತೇನೆ. ಆದನ್ನು ತಪ್ಪಿಸಲಿಕ್ಕೆ ಆದಷ್ಟು ಜಾಗತ್ತೆ ಏರ್ಪಾಡು ಮಾಡಲಾಗುತ್ತದೆಯೆ ? ದುರದೃಷ್ಟವಶಾತ್ ಪ್ರತಿಪರ್ಷದ ಬಡ್ಜೆಟ್‌ನಲ್ಲಿ ಆದಕ್ಕಾಗಿ ಹಣವನ್ನು ಮೀಸಲಾಗಿಟ್ಟಿಲ್ಲ. ಆದ್ದರಿಂದ ಇದರ ಬಗ್ಗೆ ಯಾವ ಕ್ರಮ ಕೈಗೊಳ್ಳುತ್ತಾರೆನ್ನುವ ಅನುಮಾನಾಸ್ಪ ಉತ್ತರ ಬಂದಿರುವುದರಿಂದ, ಅದಕ್ಕೆ ನಿಖರವಾದ ಉತ್ತರವನ್ನು ನಾನು ಕೋರುತ್ತಿದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಇದೊಂದು ಅತ್ಯಂತ ಪ್ರಾಮುಖ್ಯವಾದಂಥ ರಾಜ್ಯದ ಹೆದ್ದಾರಿ. ಒಂದು ದಿನಕ್ಕೆ ೨೫ ಸಾವಿರ ಟನ್ ಭಾರದ ವಾಹನಗಳ ಓಡಾಡುವ ಒತ್ತಡ ಇದೆ. ಇದು ಮೈಸೂರು ಮತ್ತು ಬೆಂಗಳೂರು, ಈ ಎರಡು ನಗರಗಳ ಒಂದು ಸಂಪರ್ಕ ಆಷ್ಟೇ ಅಲ್ಲ, ತಮಿಳುನಾಡು, ಕೇರಳದ ಭಾಗಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆ ಇದೆ. ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ವಾಹನಗಳು ಈ ರಸ್ತೆಯಲ್ಲಿ ಓಡಾಡುತ್ತಿರುವುದು ನವಂಗೆ ಗೊತ್ತಿದೆ. ಈ ರಸ್ತೆಯನ್ನು ಎಕ್ಸ್‌ಪ್ರೆಸ್ ಹೈವೇ ಮಾಡುವುದಕೆ ಆಷ್ಟೇ ಪ್ರಬಲವಾದ ಆಡಚಣೆಗಳಂ ಇವೆ, ಆ ಭಾಗದಲ್ಲಿರತಕ್ಕಂಥ ಫಲವತ್ತಾದ ಭೂಮಿಯಂನ್ನು ನಾವು ತೆಗೆದುಕೊಳ್ಳಬೇಕಂ. ಇವೊತ್ತಲ್ಲ ನಾಳೆ ಇದನ್ನು ನಾವು ಮಾಡಲೇ ಬೇಕಂ. ಇದಕ್ಕೆ ಒಂದು ಸ್ವರೂಪ ಕೊಡಬೇಕೆಂದು ನನಗಂತೂ ಆಸೆ ಇದೆ. ಇದರ ಬಗ್ಗೆ ಪ್ರಾಪಾಣಿಕ ಪ್ರಯತ್ನ ಮಾಡುತ್ತಿದ್ದೇವೆ. ಈಗ ಅಂದಾಜುಪಟ್ಟಿ, ವಿನ್ಯಾಸ, ಸಮೀಕ್ಷೆ ಮಾಡುವುದಕೆ, ನಾವು ಗ್ಲೋಬಲ್ ಟೆಂಡರ್ ಕರೆದಿದ್ದೇವೆ. ೧೮ ಫರ್ಮ್‌ಗಳು ಮುಂದೆ ಬಂದಿವೆ. ಆದರಲ್ಲಿ ಸರ್ಕಾರ ಏಳು ಫರ್ಮ್‌ಗಳ ಬಗ್ಗೆ ಸಮಾಲೋಚನೆ ಮಾಡಬೇಕಾಗಿದೆ ಇವು ಇಂಟರ್‌ನ್ಯಾಷನಲ್ ರೆಪ್ಯುಟೇಷನ್ ಇರತಕ್ಕಂಥ ಫರ್ಮ್‌ಗಳಂ. ಇವುಗಳ ಜೊತೆ ಸಮಾಲೋಚನೆ ಮಾಡುತ್ತಿದ್ದೇವೆ. ಇದಂ ರಾಮನಗರ ಆಗಬಹುದು, ಚನ್ನಪಟ್ಟಣ ಆಗಬಹುದು ಮಂಡ್ಯ ಆಗಬಹುದಂ. ಇವೆಲ್ಲಾ ಕಡೆಗೆ ಫ್ಲೈಓವರ್ಸ್ ಹಾಕಿ ವಾಹನಗಳ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕಾಗುತ್ತದೆ. ಇದಕ್ಕೆ ಸ್ಪೆಷಲ್ ಟೆಕ್ನಿಕಲ್ ಸ್ಕಿಲ್ ಬೇಕಾಗುತ್ತದೆ. ಈ ಕೆಲಸಕ್ಕೆ ಅಂದಾಜು ಒಂದು ಕೋಟಿ ಎಂದು ಇದ್ದರೂ ಅದಕ್ಕಿಂತ ಹೆಚ್ಚು ಖರ್ಚಾಗಬಹುದು. ಇದು ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಬರಲಿಕ್ಕೆ ಕಷ್ಟ ಇದೆ. ಅದಕ್ಕಾಗಿ ಫೈನಾನ್ಸಿಂಗ್ ಇನ್ಸ್‌ಟ್ಯೂಷನ್‌ಗಳ ಜೊತೆ ಸಮಾಲೋಚನೆ ಮಾಡಿ ಇದಂ ಒಳಗಡೆ ಅಥವಾ ಹೊರಗಡೆ ಇರುವ ಬ್ಯಾಂಕಿಂಗ್ ಇನ್ಸ್‌ಟ್ಯೂಷನ್‌ಗಳೇನಿವೆ, ಇವುಗಳ ಮೂಲಕ ಸಂಂಕವನ್ನಾಗಲೀ ಹಾಕಿ, ಸಂಗ್ರಹ ಮಾಡತಕ್ಕಂಥ ಹೊರಗಡೆ ಬಂದು ವರ್ಲ್ಡ್ ಬ್ಯಾಂಕ್ ಇರಬಹುದು, ಬೇರೆಬೇರೆ ಆರ್ಥಿಕ ಸಂಸ್ಥೆಗಳಿಂದ ಹಣ ದೊರಕಿಸಿಕೊಂಡು ಇದನ್ನು ಮಾಡಬೇಕೆಂಬ ಪ್ರಾಪಾಣಿಕ ಕಾಳಜಿ ಇದೆ ಈಗ ಇಷ್ಟು ವಿವರಣೆ ಕೊಡಬಲ್ಲೆ, ಏನೆಂದರೆ ಇದಕ್ಕೆ ಎಷ್ಟು ಮಂತಂವರ್ಜಿ ವಹಿಸಬೇಕೋ ಅಷ್ಟು ಮುತಂವರ್ಜಿ ವಹಿಸಿ ಮಾಡುತ್ತಿದ್ದೇವೆ. ಕೇಂದ್ರ ಸರ್ಕಾರ ಇದಕ್ಕೆ ಹಣ ಕೊಡಬೇಕೆಂದು ಒತ್ತಾಯ ಮಾಡುವುದಕ್ಕೆ ನಾವು ಹೋಗಾವುದಿಲ್ಲ. ಇದಕ್ಕೆ ವಿಶೇಷವಾದಂಥ ಕಾರ್ಯಕ್ರಮ ತೆಗೆದುಕೊಳ್ಳುವುದಾದರೆ ತೆಗೆದುಕೊಳ್ಳಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ ಎಂದು ಹೇಳಲಿಕ್ಕೆ ಇಷ್ಟಪಡುತ್ತೇನೆ. ಇತ್ತೀಚೆಗೆ ನಾನಂ ದಕ್ಷಿಣ ಕೊರಿಯಾದ ಸಿಯೋಲ್‌ಗೆ ಹೋಗಿದ್ದಾಗ ಅಲ್ಲಿ ಎಂಟನೂರು ಕಿಲೋಮಿಟರ್ ರಸ್ತೆಯನ್ನು ಮಾಡಿರುವುದನ್ನು ನೋಡಿದೆ. ಖಾಸಗಿಯಾಗಿ ಬಂಡವಾಳ ಹೂಡಿ ಇದನ್ನು ಅಲ್ಲಿ ಮಾಡಿದ್ದಾರೆ. ಆದೇರೀತಿ ನಾವು ಇಲ್ಲಿ ಬೇರ ಬ್ಯಾಂಕಿಂಗ್ ಇನ್‌ಸ್ಟಿಟ್ಯೂಷನ್‌ನಿಂದ ಹಣ ತೆಗೆದುಕೊಂಡು, ಇದಕ್ಕೆ ವಿಶೇಷವಾದಂಥ ವಿಧೇಯಕವನ್ನು ಸಭೆಯಂಪಾಂದೆ ಬೇಕಾದರೆ ಮಂಡನೆ ಮಾಡಿ, ಟ್ರಾಫಿಕ್ ಮೇಲೆ ಹೆಚ್ಚು ಹಣ ಹಾಕಿ, ಲಾರಿ, ಕಾರು ಬಸ್ಸು ಮಂತಕ್ಕು ಎರಡುಚಕ್ರ ವಾಹನಗಳ ಮೇಲೆ ಸಂಂಕ ವಿಧಿಸಿದರೆ, ಎಷ್ಟು ಖರ್ಚು

ಮಾಡಿದರೂ ಕೂಡ, ಹತ್ತು ವರ್ಷಗಳಲ್ಲಿ ಈ ಹಣ ವಾಪಸ್ಸು ಬರುತ್ತದೆ. ಇದಂ ಹೆವಿ ವೆಹಿಕ್ಯೂಲರ್ ಟ್ರಾಫಿಕ್ ರಸ್ತೆ ಇದೆ ಸರ್ಕಾರ ಇದಕ್ಕೆ ಒಂದು ಯಾವುದಾದರೂ ಸ್ವರೂಪ ಕೊಡುತ್ತದೆ. ಇದಕ್ಕೆ ಬಹಳ ಕಾಳಜಿ ವಹಿಸುತ್ತೇವೆ ಎಂಬ ಮಾತನ್ನು ಹೇಳುತ್ತಾ, ಇದನ್ನು ಎಕ್ಸ್‌ಪ್ರೆಸ್ ಹೈವೇ ಮಾಡಬೇಕೆಂಬ ಅಪೇಕ್ಷೆ ನಮಗೆ ಇದೆ ಎಂದು ಹೇಳಿಂತ್ತೇನೆ.

ಅಧ್ಯಕ್ಷರು.—೪೨೩ (೯೯೦) ನಂಬರಿನ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿದೆ.

ಕಾಪು ಕ್ಷೇತ್ರದಲ್ಲಿಯಂ ಉಪ್ಪು ನೀರು ತಡೆ ಆಣೆಕಟ್ಟುಗಳ ರಿಪೇರಿ ಬಗ್ಗೆ.

೧೦೭೫. ಶ್ರೀ ವಸಂತ ವಿ. ಸಾಲಿಯಾನ (ಕಾಪು).— ಮಾನ್ಯ ಲೋಕೋಪಯೋಗಿ ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಾಪು ಕ್ಷೇತ್ರದ ೧೨ ಮಂಡಲ ಪಂಚಾಯತ್‌ಗಳಲ್ಲಿ ಒಟ್ಟು ಎಷ್ಟು ಉಪ್ಪು ನೀರು ತಡೆ ಆಣೆಕಟ್ಟುಗಳಿವೆ ?

ಆ) ಇವುಗಳಲ್ಲಿ ಎಷ್ಟು ಆಣೆಕಟ್ಟುಗಳು ನಾದುರಸ್ತಿಯಲ್ಲಿವೆ ?

ಇ) ಸದರಿ ಆಣೆಕಟ್ಟುಗಳನ್ನು ಯಾವಾಗ ದುರಸ್ತಿ ಮಾಡಲಾಗುವುದು ಹಾಗೂ ಇದಕ್ಕೆ ಎಷ್ಟು ವೆಚ್ಚವಾಗುವುದು ?

ಈ) ಈ ವೆಚ್ಚಕ್ಕೆ ಬೇಕಾದ ಹಣವನ್ನು ಕೂಡಲೇ ಮಂಜೂರು ಮಾಡಿ ದುರಸ್ತಿ ಕಾರ್ಯ ಪ್ರಾರಂಭಿಸುವರೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೬

ಆ) ೪ ಆಣೆಕಟ್ಟುಗಳು ಕೆಲಸ ಮಾಡುತ್ತಿಲ್ಲ. ೨ ಆಣೆಕಟ್ಟುಗಳಿಗೆ ಸಣ್ಣ ಪುಟ್ಟ ರಿಪೇರಿ ಅವಶ್ಯಕ.

ಇ)
ಮತ್ತು } ಸುಮಾರು ೯.೯೦ ಲಕ್ಷ ರೂ. ವೆಚ್ಚವಾಗುವುದು. ಹಣಕಾಸಿನ ಲಭ್ಯತೆಯನ್ನ
ಈ) } ವಲಂಬಿಸಿ, ಕ್ರಮ ತೆಗೆದುಕೊಳ್ಳಲಾಗುವುದು.

ಜೊತೆಗೆ ಇನ್ನೊಂದು ವಿಚಾರ ಹೇಳುವುದಾದರೆ ಇನ್ನು ಮುಂದೆ ಇವೆಲ್ಲಾ ಚಿಲ್ಲಾ ಪರಿಷತ್‌ನ ವ್ಯಾಪ್ತಿಗೆ ಹೋಗುತ್ತವೆ.

ಶ್ರೀ ವಸಂತ ವಿ. ಸಾಲ್ಯಾನ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ೧೨ ಮಂಡಲ್ ಪಂಚಾಯಿತಿಗಳಲ್ಲಿ ೬ ಆಣೆಕಟ್ಟುಗಳು ಇವೆ ಎಂದು ಹೇಳಿದ್ದಾರೆ. ಈ ಬಗ್ಗೆ ಅಧಿಕಾರಿಗಳು ಸಚಿವರಿಗೆ ತಪ್ಪು ಮಾಹಿತಿ ಕೊಟ್ಟಿದ್ದಾರೆ. ನನ್ನ ಗಮನಕ್ಕೆ ಬಂದಿರುವ ಪ್ರಕಾರ ೧೫ ಆಣೆಕಟ್ಟುಗಳು ಇವೆ. ಇದರಲ್ಲಿ ೪ ಆಣೆಕಟ್ಟುಗಳು ಕೆಲಸ ಮಾಡುತ್ತಿಲ್ಲ, ಎರಡು ಆಣೆಕಟ್ಟುಗಳಿಗೆ ಸಣ್ಣ ರಿಪೇರಿ ಎಂದು ಹೇಳಿದ್ದಾರೆ. ನನ್ನ ಲೆಕ್ಕದಲ್ಲಿ ಅದರಲ್ಲಿ ಸುಮಾರು ೧೦ ಆಣೆಕಟ್ಟುಗಳು ಈಗಲೂ ಕೆಲಸ ಮಾಡುತ್ತಿಲ್ಲ. ಪಲಿಮಾರು ೧೦ ವರ್ಷದಿಂದ ಈ ಆಣೆಕಟ್ಟುಗಳು ರಿಪೇರಿ ಆಗಿಲ್ಲ. ಉದಾಹರಣೆಗೆ ಮಟ್ಟು ಮತ್ತು ಪಲಿಮಾರು ಆಣೆಕಟ್ಟುಗಳು ಈಗಲೂ ಕೆಲಸ ಮಾಡುತ್ತಿಲ್ಲ. ೯ ಲಕ್ಷದ ೯೦ ಸಾವಿರ ರೂಪಾಯಿಗಳನ್ನು ಈ ೬ ಆಣೆಕಟ್ಟುಗಳ ರಿಪೇರಿಗೆ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಈ ತನಕ ಅಲ್ಲಿನ ಹಲಗೆಗಳನ್ನೂ ಕೂಡ ಬದಲಾವಣೆ ಮಾಡಿಲ್ಲ, ರಿಪೇರಿ ಮಾಡಿಲ್ಲ. ಆದ್ದರಿಂದ ನೀವು ಕೊಟ್ಟಿರುವ ೯ ಲಕ್ಷ ೯೦ ಸಾವಿರ ರೂಪಾಯಿಗಳು ಸಾಕಾಗುವುದಿಲ್ಲ. ಕೊನೆಯ ಪಕ್ಷ ೧೫ ಲಕ್ಷ ರೂಪಾಯಿಗಳಾದರೂ ನನ್ನ ಕ್ಷೇತ್ರಕ್ಕೆ ಕೊಡಬೇಕು, ಈ ವರ್ಷವೇ ಕೊಡಬೇಕು. ಮತ್ತು ಈ ಎಲ್ಲಾ ಆಣೆಕಟ್ಟುಗಳನ್ನೂ ತುರ್ತಾಗಿ ರಿಪೇರಿ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.